**OS.No.15/2020**
**ಪಿಡಬ್ಲ್ಯೂ:1**

**ದಿಃ 24-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ವೈಡಿ ಎಸ್ ಪ್ರತಿವಾದಿಗಳ ಪರ ವಕೀಲರಿಂದ**

ನನ್ನ ತಂದೆಯ ಆಸ್ತಿ ಬೇಕು ಎಂದು ಪರಿಹಾರ ಕೋರಿ ನಾನು ಪ್ರಕರಣ ದಾಖಲಿಸಿದ್ದೇನೆ. ಪ್ರಕರಣ ದಾಖಲಿಸಲು ನಾನೇ ಮಾಹಿತಿ ನೀಡಿದ್ದೇನೆ. ದಾವಾ ಆಸ್ತಿಗಳ ಸರ್ವೆ ನಂ ಮತ್ತು ಚೆಕ್ಕುಬಂದಿ ಗೊತ್ತಿಲ್ಲ. ದಾವಾ ಆಸ್ತಿಗಳ ಪಹಣಿ ಪತ್ರಿಕೆ ದಾಖಲೆಗಳನ್ನು ಹಾಜರುಪಡಿಸಿದ್ದು, ಇತರೆ ದಾಖಲೆಗಳನ್ನು ಸಹ ಹಾಜರುಪಡಿಸಿದ್ದೇನೆ ಅವುಗಳ ವಿವರ ಗೊತ್ತಿಲ್ಲ. ನಿಪಿ 1 ರ ವಂಶ ವೃಕ್ಷದ ದಾಖಲೆಯನ್ನು ನಾನೇ ತಯಾರಿಸಿ ಹಾಕಿದ್ದು ಅದನ್ನು ಕಂದಾಯ ಇಲಾಖೆಯವರು ನೀಡಿಲ್ಲ. ನನ್ನ ತಂದೆ ನಾಗಪ್ಪ ಅಂದರೆ 1 ನೇ ಪ್ರತಿವಾದಿ ಸುಮಾರು 4 ವರ್ಷಗಳ ಹಿಂದೆ ನನ್ನನ್ನು ಮತ್ತು ನನ್ನ ತಾಯಿಯನ್ನು ಮನೆಯಿಂದ ಹೊರ ಹಾಕಿದ್ದರು. ಹಾಗೆ ನಮ್ಮನ್ನು ಮನೆಯಿಂದ ಹೊರ ಹಾಕಿದ ಬಗ್ಗೆ ಒಂದನೇ ಪ್ರತಿವಾದಿಯ ವಿರುದ್ದ ನಾನು ಪೊಲೀಸ್ ದೂರು ನೀಡಿಲ್ಲ. ಆ ಬಗ್ಗೆ ದಾಖಲೆಯನ್ನು ನಮ್ಮ ವಕೀಲರಿಗೆ ನೀಡಿದ್ದೇನೆ. ನಾನು 1 ನೇ ಪ್ರತಿವಾದಿಯ ಮಗ ಎಂದರೆ ಸರಿಯಲ್ಲ. ನನ್ನ ತಾಯಿಯ ವಿವಾಹ 1 ನೇ ಪ್ರತಿವಾದಿಯೊಂದಿಗೆ ಯಾವಾಗ ಆಗಿತ್ತು ಎಂದು ಗೊತ್ತಿಲ್ಲ. ಹೊಸದುರ್ಗ ಗ್ರಾಮದ ಆಲರಾಮೇಶ್ವರ ದೇವಸ್ಥಾನದಲ್ಲಿ ನನ್ನ ತಾಯಿಯ ವಿವಾಹ ಆಗಿತ್ತು. 1 ನೇ ಪ್ರತಿವಾದಿ ನನ್ನ ತಂದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೇನೆ. ಸದರಿ ದಾಖಲೆ ಯಾವ ದಾಖಲೆ ಎಂದು ಹೇಳಲಾಗುವುದಿಲ್ಲ. ಪ್ರತಿವಾದಿಗಳು ಸಲ್ಲಿಸಿದ್ದ ಪ್ರತಿವಾದ ಪತ್ರದ ಸಂಗತಿ ಬಗ್ಗೆ ನನಗೆ ಗೊತ್ತಿಲ್ಲ. ನಾನು ನನ್ನ ತಾಯಿ ಮತ್ತು ನನ್ನ ಅಜ್ಜಿ ಪ್ರಸ್ತುತ ಒಂದೇ ಮನೆಯಲ್ಲಿ ವಾಸವಿದ್ದೇವೆ. ನಾನು ಹುಟ್ಟಿದಾಗಿನಿಂದ ನನ್ನ ಅಜ್ಜಿಯ ಮನೆಯಲ್ಲಿ ವಾಸವಿದ್ದೇನೆ ಎಂದರೆ ಸರಿ. ನನ್ನ ಅಜ್ಜಿಗೆ ಮೂರು ಜನ ಹೆಣ್ಣು ಮಕ್ಕಳಿದ್ದು ಗಂಡು ಮಕ್ಕಳು ಇಲ್ಲ ಎಂದರೆ ಸರಿ. ನನ್ನ ಅಜ್ಜಿಯ ಇಬ್ಬರು ಹೆಣ್ಣು ಮಕ್ಕಳು ವಿವಾಹವಾಗಿ ಅವರವರ ಗಂಡಂದಿರ ಮನೆಗಳಲ್ಲಿ ವಾಸವಿದ್ದಾರೆ ಎಂದರೆ ಸರಿ. ಅದೇ ರೀತಿ ನನ್ನ ತಾಯಿ ನನ್ನ ಅಜ್ಜಿಯ ಮನೆಯಲ್ಲಿ ವಾಸವಿದ್ದಾರೆ ಎಂದರೆ ನನ್ನ ತಾಯಿಯನ್ನು ಮನೆಯಿಂದ ಹೊರ ಹಾಕಿದ ನಂತರ ಅಜ್ಜಿಯ ಮನೆಯಲ್ಲಿ ವಾಸವಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಜನನ ಪ್ರಮಾಣ ಪತ್ರ ಮತ್ತು ತಾಯಿಯ ಕಾರ್ಡ್ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಹೆಂಡತಿ ಪೂರ್ಣಮ್ಮ ಮಕ್ಕಳಾದ ಬಸವರಾಜ್ ಮತ್ತು ಪೂಜಾ ಅವರೊಂದಿಗೆ ವಾಸವಿದ್ದಾರೆ ಎಂದರೆ ಸಾಕ್ಷಿ ನಮ್ಮನ್ನು ಹೊರಹಾಕಿ ಎರಡನೇ ಹೆಂಡತಿಯೊಂದಿಗೆ

ವಾಸವಿದ್ದಾರೆ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ಪೂರ್ಣಮ್ಮರವರು ಒಂದನೇ ಪ್ರತಿವಾದಿಯ ಎರಡನೇ ಹೆಂಡತಿ ಮತ್ತು ಬಸವರಾಜ್ ಮತ್ತು ಪೂಜಾ ರವರು ಪೂರ್ಣಮ್ಮ ರವರ ಮಕ್ಕಳು ಎಂದು ಹೇಳಿಲ್ಲ. ಸದರಿ ಪೂರ್ಣಮ್ಮ ಬಸವರಾಜ್ ಮತ್ತು ಪೂಜಾರವರನ್ನು ಈ ಪ್ರಕರಣದಲ್ಲಿ ಪ್ರತಿವಾದಿಗಳನ್ನಾಗಿ ಕಾಣಿಸಿಲ್ಲ ಎಂದರೆ ಸರಿ.

ಶ್ರೀ ವೈ ಡಿ ಎಸ್ ವಕೀಲರ ವಿನಂತಿಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.